**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಪಾವಗಡ**

ದಿಃ 3-8-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು .

| | |
|---|---|
| ಹೆಸರು | ಮಂಜುಳ |
| ತಂದೆಯ ಹೆಸರು | ಸೋಮರೆಡ್ಡಿ |
| ವಯಸ್ಸು | 36 |
| ವೃತ್ತಿ | ಖಾಸಗಿ ಕೆಲಸ |
| ವಾಸ ಸ್ಥಳ | ಪಾವಗಡ |

**ಮುಖ್ಯ ವಿಚಾರಣೆ ಃ** ಶ್ರೀ ಪಿ ವಿ ವೈ ವಕೀಲರಿಂದ ವಾದಿ ಪರವಾಗಿ .

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿದ್ದು , ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ . ಅವುಗಳನೆಲ್ಲಾ ಓದಿಸಿ , ಕೇಳಿಸಿಕೊಂಡು ಸಹಿ ಮಾಡಿರುತ್ತೇನೆ .

ನನ್ನ ದಾವೆಗೆ ಪೂರಕವಾಗಿ ದಾಖಲೆಗಳನ್ನು ಹಾಜರು ಪಡಿಸುತ್ತಿದ್ದು , ಪ್ರತಿವಾದಿ ನನಗೆ ದಿಃ 28-8-2019 ರಂದು ಬರೆದುಕೊಟ್ಟ ಆನ್ ಡಿಮ್ಯಾಂಡ್ ಪ್ರನೋಟನ್ನು ನಿಪಿ -1 ಎಂದು , ದಿಃ 19-2-2021 ರಂದು ಪ್ರತಿವಾದಿಗೆ ನೀಡಿದ ತಿಳುವಳಿಕೆ ಪತ್ರದ ಕಛೇರಿ ಪ್ರತಿಯನ್ನು ನಿಪಿ-2 ಎಂದು , ಅಂಚೆ ರಶೀದಿಯನ್ನು ನಿಪಿ -3 ಎಂದು , ಅಂಚೆ ಸ್ವೀಕೃತಿಯನ್ನು ನಿಪಿ -4 ಎಂದು ಗುರುತಿಸಲಾಯಿತು .

ನಿಪಿ -1 ದಾಖಲೆಯನ್ನು ನಾನು ಈಗ ನೋಡುತ್ತಿದ್ದೇನೆ . ಸದರಿ ದಾಖಲೆಗೆ ಪ್ರಭು ಮತ್ತು ಲೋಕೇಶರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ . ಸದರಿಯವರ ಸಹಿಗಳನ್ನು ನಾನು ಈಗ ನೋಡುತ್ತಿದ್ದೇನೆ . ಸಾಕ್ಷಿ ನೋಡಿ ಗುರುತಿಸಿದ ಪ್ರಭು ಮತ್ತು ಲೋಕೇಶರವರ ಸಹಿಗಳನ್ನು ಅನುಕ್ರಮವಾಗಿ ನಿಪಿ 1(ಎ) ಮತ್ತು ನಿಪಿ 1(ಬಿ) ಎಂದು ಗುರುತಿಸಲಾಯಿತು .

ನಿಪಿ–1 ದಾಖಲೆಯನ್ನು ಪತ್ರತಯಾರಕರಾದ ಎಸ್ ರುದ್ರಯ್ಯರವರು ತಯಾರಿಸಿರುತ್ತಾರೆ . ಸದರಿಯವರ ಸಹಿಯನ್ನು ಈಗ ನಾನು ನೋಡುತ್ತಿದ್ದೇನೆ . ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಯನ್ನು ನಿಪಿ 1(ಸಿ) ಎಂದು ಗುರುತಿಸಲಾಯಿತು . ನಿಪಿ –1 ದಾಖಲೆಗೆ ಪ್ರತಿವಾದಿ ತನ್ನ ಸಹಿ ಮಾಡಿದ್ದು , ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಯನ್ನು ನಿಪಿ 1(ಡಿ) ಎಂದು ಗುರುತಿಸಲಾಯಿತು .

**ಪಾಟೀಸವಾಲುಃ** ಪ್ರತಿವಾದಿ ಪರವಕೀಲರು ಪಾಟೀಸವಾಲು ಮಾಡಲು ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು .

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯ ಗಣಕಯಂತ್ರದಲ್ಲಿ ಬೆರಳಚ್ಚುಮಾಡಲಾಯಿತು )

**ಓ ಹೇ ಕೇ ಸರಿ ಇದೆ**

**ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ**
**ಪಾವಗಡ.**